# ‘ನೀ ಮಹಾ ಮಹಿಮಳಮ್ಮಾ !’

ಸಿ.ಎಸ್. ಮಂಗಳಮ್ಮ

ಶ್ರೀಮಾತೆ ಶಾರದಾದೇವಿಯರ ದೈವೀ ವ್ಯಕ್ತಿತ್ವವನ್ನು ಕುರಿತು ಎಷ್ಟು ಬಗೆಯಲ್ಲಿ ಚಿಂತಿಸಿದರೂ, ಅವರು ಇನ್ನಷ್ಟು ಅಗಮ್ಯರಾಗಿಯೇ ಉಳಿಯುತ್ತಾರೆ; ಆದರೆ ಈ ಬಗೆಯ ಚಿಂತನೆ ಒಂದು ಬಗೆಯ ಸ್ಮರಣೆ, ಮನನವೇ ಆಗುವುದು; ಇದೂ ಒಂದು ಸಾಧನೆಯಾಗುವುದು. ಈ ಹಿನ್ನೆಲೆಯಲ್ಲಿ ಬರೆದಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**‘ಮಹಿಮೆ ಮಹಿಮೆಯನರಿವುದೆಂದೆಂಬರಮ್ಮ**
**ಗುರುವರ್ಯನಂ ತಿಳಿದ ನೀ ಮಹಿಮಳಮ್ಮ’**

ಎಂದು ರಾಷ್ಟ್ರಕವಿ ಕುವೆಂಪು ಅವರು ಶ್ರೀಮಾತೆ ಶಾರದಾದೇವಿಯರನ್ನು ಸ್ತುತಿಸಿ, ಕೊಂಡಾಡಿದ್ದಾರೆ. ಯಾರ ಮಹಿಮೆಯನ್ನು ಯಾರು ಅರಿತರು? ಮಹಾಮಹಿಮರೆನಿಸಿದ್ದು ಹೇಗೆ? ಶ್ರೀಮಾತೆಯವರ ಜೀವನವನ್ನು ಮನವಿಟ್ಟು ಗಮನಿಸಿದಾಗ ಈ ಪ್ರಶ್ನೆಗೆ ಉತ್ತರವನ್ನು ಪಡೆಯಬಹುದು. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ಶಾರದಾದೇವಿಯವರು ಜಗದ್ಧಿತಕ್ಕಾಗಿ ಬದುಕನ್ನು ಮೀಸಲಿಟ್ಟ ದಂಪತಿಗಳು. **‘ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ, ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ’** ಎಂದು ಶ್ರೀಕೃಷ್ಣಪರಮಾತ್ಮನು ಜಗತ್ತಿಗೆ ಅಭಯ ನೀಡಿದ್ದಾನಲ್ಲವೆ? ಧರ್ಮ-ಧರ್ಮಗಳ ನಡುವೆ ತಿಕ್ಕಾಟವುಂಟಾಗಿ ಜನಜೀವನ ಅಸ್ತವ್ಯಸ್ತವಾಗಿದ್ದ ಸಂಕ್ರಮಣ ಕಾಲದಲ್ಲಿ ಶ್ರೀರಾಮಕೃಷ್ಣರು ಅವತರಿಸಿದರು. ಅವತಾರ ಪುರುಷರು ಧರೆಗೆ ಬರುವಾಗ ತಮ್ಮ ಕಾರ್ಯಕ್ಕೆ ನೆರವಾಗಲು ಜೊತೆಯಲ್ಲಿ ಕೆಲವರನ್ನು ಕರೆತರುತ್ತಾರೆ. ಅಂತೆಯೇ ಶ್ರೀರಾಮಕೃಷ್ಣರ ಲೋಕಕಲ್ಯಾಣಕಾರ್ಯದಲ್ಲಿ ಜೊತೆಗೂಡಿದವರು ಶ್ರೀಮಾತೆ ಶಾರದಾದೇವಿಯವರು. ಬಾಳ ಸಂಗಾತಿಯಾಗಿ, ಸಹಧರ್ಮಚಾರಿಣಿಯಾಗಿ, ಜಗನ್ಮಾತೆಯಾಗಿ ಕಾರ್ಯವನ್ನು ನಿರ್ವಹಿಸಿದವರು. ‘ಸರ್ವಧರ್ಮಸಮನ್ವಯಾಚಾರ್ಯ’ರಿಗೆ ಶಕ್ತಿದೇವತೆಯಾಗಿ ಕೈಜೋಡಿಸಿ ಪೂಜನೀಯರಾಗಿದ್ದಾರೆ. ‘ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ’ ಎಂಬ ಶರಣರ ವಚನದಂತೆ ಇವರು ಜಗತ್ತಿನ ಕಲ್ಯಾಣಕ್ಕಾಗಿ ಬಾಳಿದ ದಂಪತಿಗಳು!

ಬಾಲ್ಯದ ಒಂದೆರಡು ಘಟನೆಗಳು ಇದನ್ನು ಪುಷ್ಟೀಕರಿಸುತ್ತವೆ. ಶಾರದಾದೇವಿಯವರಿಗೆ ೩-೪ ವರ್ಷ ವಯಸ್ಸಿದ್ದಿರಬಹುದು; ತಾಯಿಯ ಜೊತೆಯಲ್ಲಿ ಸಿಹೋರಿನ ಜಾತ್ರೆಗೆ ಹೋಗಿದ್ದರು. ಜಾತ್ರೆ ಎಂದ ಮೇಲೆ ಮನರಂಜನೆ, ಆಟಿಕೆಗಳು, ಆಕರ್ಷಣೀಯ ವಸ್ತುಗಳು ತಮ್ಮತ್ತ ಸೆಳೆಯುವಂತೆ ಇರುತ್ತವೆ. ಜೊತೆಗೆ ಅಲ್ಲಲ್ಲಿ ಭಜನಾ ತಂಡಗಳು, ಗಾಯನಗಳು ನೆರೆದಿದ್ದವರನ್ನು ಸಂತಸಗೊಳಿಸುತ್ತಿದ್ದವು. ತಾಯಿಯ ಬಳಿಯಲ್ಲಿದ್ದ ಪುಟ್ಟ ಬಾಲೆಯನ್ನು ಜೊತೆಯಲ್ಲಿದ್ದ ಮಹಿಳೆಯೊಬ್ಬರು ಎದುರಿಗೆ ಇದ್ದ ಯುವ ಭಜನಾ ತಂಡದತ್ತ ಕೈ ತೋರಿಸುತ್ತಾ, ‘ಶಾರದೆ, ಅವರಲ್ಲಿ ನೀನು



ಯಾರನ್ನು ಮದುವೆ ಆಗುತ್ತೀಯಾ?’ ಎಂದು ಹುಡುಗಾಟಕ್ಕಾಗಿ ಕೇಳಿದರು. ನಿರ್ಭಯಳಾಗಿ, ಸಹಜವಾಗಿ ಎಂಬಂತೆ ತನ್ನ ಎದುರಿನಲ್ಲಿದ್ದ ಒಬ್ಬ ಯುವಕನತ್ತ ತನ್ನ ತೋರುಬೆರಳನ್ನು ತೋರಿಸಿದಳು. ಇದು ಅವರಿಗೆಲ್ಲ ತಮಾಷೆಯ ಮಾತಾಯಿತು. ದೈವ ಸಂಕಲ್ಪವಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲವೆಂಬ ಸತ್ಯಕ್ಕೆ ಮುನ್ಸೂಚನೆಯೇನೋ ಎಂಬಂತಾದುದು ಮಾತ್ರ ವಿಶೇಷ.

ದಕ್ಷಿಣೇಶ್ವರದಲ್ಲಿ ಭವತಾರಿಣಿ ಅರ್ಚಕರಾಗಿದ್ದ ಶ್ರೀರಾಮಕೃಷ್ಣರು ಅಧ್ಯಾತ್ಮ ಸಾಧಕರು. ದೈವಸಾಕ್ಷಾತ್ಕಾರಕ್ಕಾಗಿ ಕಠಿಣ ಸಾಧನೆಯಲ್ಲಿ ತೊಡಗಿದಾಗ ಅವರ ದೇಹಸ್ಥಿತಿಯಲ್ಲಿ ವ್ಯತ್ಯಾಸವಾಯಿತು. ಈ ಸುದ್ದಿ ಕಾಮಾರಪುಕುರದಲ್ಲಿದ್ದ ಅವರ ತಾಯಿ ಚಂದ್ರಮಣಿ ದೇವಿಯವರಿಗೂ ತಲುಪಿತು. ಔಷಧೋಪಚಾರಗಳಿಗಾಗಿ ಮಗನನ್ನು ಹಳ್ಳಿಗೆ ಕರೆಸಿಕೊಂಡರು. ವೈದ್ಯಕೀಯದ

ಜೊತೆಗೆ ಯಂತ್ರ, ಮಂತ್ರಗಳನ್ನೂ ಮಾಡಿದರು. ನೆರೆಹೊರೆಯವರು, ಬಂಧುಗಳು 'ಇದು ಮದುವೆಯ ವಯಸ್ಸು. ಮಗನಿಗೆ ಮದುವೆ ಮಾಡು. ಎಲ್ಲವೂ ಸರಿಹೋಗುತ್ತದೆ' ಎಂದು ಸಲಹೆಯನ್ನಿತ್ತರು. ಹಾಗಾಗಿ ಕನ್ಯಾನ್ವೇಷಣೆಗೆ ಸಿದ್ಧರಾದಾಗ ತಾಯಿಗೆ ಶ್ರೀರಾಮಕೃಷ್ಣರು 'ಅಲ್ಲಿ ಇಲ್ಲಿ ಏಕೆ ಅಲೆದಾಡುತ್ತೀರಿ? ಹತ್ತಿರದ ಜಯರಾಂಬಾಟಿಯಲ್ಲಿ ರಾಮಚಂದ್ರ ಮುಖರ್ಜಿಯ ಮಗಳು ನನಗಾಗಿಯೇ ಮೀಸಲಾದ ಕನ್ಯೆ ಇದ್ದಾಳೆ. ಅಲ್ಲಿ ವಿಚಾರಿಸಿ' ಎಂದರು. ಅದರಂತೆ ಮುಂದುವರಿದರು. ಶುಭಕಾರ್ಯ ನಿರ್ವಿಘ್ನವಾಗಿ ನಡೆಯಿತು. ಶಾರದಾದೇವಿ-ಶ್ರೀರಾಮಕೃಷ್ಣರ ಲಗ್ನ ಸಂಪನ್ನವಾಯಿತು. ಸತಿ-ಪತಿಗಳ ವಯಸ್ಸಿನಲ್ಲಿ ಬಹಳ ಅಂತರವಿತ್ತು. ವಧುವಿಗೆ ಐದೂವರೆ ವರ್ಷ; ವರನಿಗೆ ೨೩ ವರ್ಷ. ಆದರೇನು ದಂಪತಿಗಳು ಜಗನ್ಮಾನ್ಯರಾದರು! ಮಹತ್ವದ ವಿಷಯವೇನೆಂದರೆ ಸಿಹೋರಿನಲ್ಲಿ ಪುಟ್ಟ ಶಾರದೆ ಯಾರನ್ನು ತನ್ನ ಗಂಡ ಎಂದು ತೋರಿಸಿದ್ದಳೋ ಅದೇ ಯುವಕ ಶ್ರೀರಾಮಕೃಷ್ಣರು. ಶಾರದೆಯ ಗಂಡ! 'ಮಹಿಮೆ ಮಹಿಮೆಯನರಿವುದೆಂದೆಂಬರಮ್ಮಾ' ಎಂಬ ಕವಿವಾಣಿಗೆ ಸಾಕ್ಷಿ!

ಮದುವೆ ಎಂದರೇನು ಎಂದರಿಯದ ಎಳೆವಯಸ್ಸಿನಲ್ಲಿ ಲಗ್ನವಾಯಿತು. ಕ್ರಮೇಣ ತಾನು ಗೃಹಿಣಿ ಎಂಬುದು ಶಾರದಾದೇವಿಯವರಿಗೆ ಅರಿವಾಯಿತು. ಹಳ್ಳಿಯಲ್ಲಿ ನಡೆಯುತ್ತಿದ್ದ ಹರಿಕಥೆ-ಪುರಾಣಗಳನ್ನು ಅವರು ಕೇಳುತ್ತಿದ್ದರು. ಅದರಲ್ಲಿ ಸೀತೆ, ಸಾವಿತ್ರಿಯರು ಇವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಈಗ ಮನಸ್ಸಿನಲ್ಲಿ ಒಂದು ಭಾವನೆ ಮೂಡಿತು. 'ನಾನೂ ಸಹ ಸೀತೆ-ಸಾವಿತ್ರಿಯರಂತೆ ಪತಿಗೆ ತಕ್ಕ ಸತಿಯಾಗಿ ಬಾಳಬೇಕು' ಎಂದು. ಸುಮಾರು ೧೩ ವರ್ಷದವರಿದ್ದಾಗ ಕಾಮಾರಪುಕುರದಲ್ಲಿ ಪತಿ ಶ್ರೀರಾಮಕೃಷ್ಣರ ಸಹವಾಸದಲ್ಲಿ ಏಳೆಂಟು ತಿಂಗಳು ಇರುವ ಅವಕಾಶ ಅವರಿಗೆ ಒದಗಿತು; ಅವರು ಪತಿಯ ಸ್ವಭಾವವನ್ನರಿತರು. ಅವರು ನೀಡುತ್ತಿದ್ದ ಶಿಕ್ಷಣಗಳು ಮನಹೊಕ್ಕಿದ್ದವು. ಪತಿಯ ಪ್ರೀತಿಗೆ ಆಕರ್ಷಿತರಾದರು. ಜೊತೆಗೆ ಅಧ್ಯಾತ್ಮದ ಕಡೆಗೂ ಗಮನ ಹರಿಸುವಂತಾಯಿತು. ಪತಿಯಲ್ಲಿ ವಿಶೇಷತೆಯನ್ನು ಕಂಡರು. ಎಲ್ಲರಂತಲ್ಲ ಎಂದರಿತು, ಇವರಿಗೆ ತಕ್ಕಂತೆ ಬಾಳುತ್ತೇನೆ ಎಂದು ನಿಶ್ಚಯಿಸಿದರು. ಶಾರದಾದೇವಿಯವರ ಸ್ವಭಾವ ಮೃದು, ಲಜ್ಜಾಪಟಾವೃತೆ. ಸ್ಥಿರಚಿತ್ತೆ, ತನ್ನ ದಾರಿಯನ್ನು ಗುರುತಿಸಿಕೊಂಡು ನಡೆಯುವ ದಿಟ್ಟೆ; ಆದರೆ ಯಾರಿಗೂ ನೋವುಂಟು ಮಾಡುವಂತೆ ಇರಲಿಲ್ಲ ಅವರ ನಡೆ-ನುಡಿಗಳು. ಮುಂದೆ ಶ್ರೀಮಾತೆ ಶಾರದಾದೇವಿಯವರ ಜೀವನದಲ್ಲಿನ ಎರಡು ಸನ್ನಿವೇಶಗಳನ್ನು ಕುರಿತು ನನ್ನ ಮನದಲ್ಲಿ ಮೂಡಿದ ಭಾವನೆಯನ್ನು ಪ್ರಸ್ತುತ ಎಲ್ಲರೊಡನೆ ಹಂಚಿಕೊಳ್ಳುವ ಉದ್ದೇಶದಿಂದ ಬರೆಯುತ್ತಿದ್ದೇನೆ. ಅದರಲ್ಲಿ ಶಾರದಾದೇವಿಯವರ ಚಿತ್ತಸ್ಥೈರ್ಯದ ವಿಶೇಷತೆಯನ್ನು ಕಾಣಬಲ್ಲೆವು. ಮೊದಲನೆಯದಾಗಿ ಅವರ ಜಯರಾಂಬಾಟಿಯಿಂದ ಮೊದಲ ಬಾರಿಗೆ ದಕ್ಷಿಣೇಶ್ವರಕ್ಕೆ ಹೊರಟ ಸನ್ನಿವೇಶ.

ಶಾರದಾದೇವಿಯವರು ಈಗ ಹದಿನೇಳು ವರ್ಷದ ನವಯುವತಿ. ಜಯರಾಂಬಾಟಿಯಲ್ಲಿ ಪತಿಯ ಆಹ್ವಾನಕ್ಕಾಗಿ ಕಾಯುತ್ತಿದ್ದಾರೆ. ಸುಮಾರು ನಾಲ್ಕು ವರ್ಷಗಳ ಕೆಳಗೆ ಕಾಮಾರಪುಕುರದಲ್ಲಿ ಅವರೊಡನೆ ಕಳೆದ ದಿನಗಳ ನೆನಪು ಹಚ್ಚ ಹಸಿರಾಗಿ ಮನಸ್ಸಿನಲ್ಲಿದೆ. ವಯೋಸಹಜವಾಗಿ ಪತಿಯೊಡನೆ ಗೃಹಸ್ಥ ಜೀವನವನ್ನು ನಡೆಸುವ ಕಲ್ಪನಾಲೋಕದಲ್ಲಿ ಚರಿಸುತ್ತಿದ್ದಾರೆ. ಅಂತಹ ಸಮಯದಲ್ಲಿ ಜಯರಾಂಬಾಟಿಗೆ ಬಿರುಗಾಳಿಯಂತೆ ಬೀಸಿಬಂತೊಂದು ಸುದ್ದಿ, 'ಭವತಾರಿಣಿ ಅರ್ಚಕರಿಗೆ ಬುದ್ಧಿಭ್ರಮಣೆ ಆಗಿದೆಯಂತೆ' ಎಂದು. 'ವಯಸ್ಸಿಗೆ ಬಂದ ಹೆಣ್ಣುಮಗಳು ಇನ್ನೂ ಗಂಡನ ಮನೆಗೆ ಏಕೆ ಹೋಗಿಲ್ಲ?' ಎಂದು ಮತ್ತೊಬ್ಬರ ಎಲೆ ಮೇಲಿನ ನೊಣವನ್ನು ಕಂಡು ಕುತ್ಸಿತವಾಡುವ ಹಳ್ಳಿಯ ಜನರಿಗೆ ಇದು ಸುಗ್ರಾಸವಾಯಿತು. ತಮ್ಮ ಪಾಡಿಗೆ ತಾವು ಇರುವುದು ಎಲ್ಲರಿಗೂ ಸಾಧ್ಯವಿಲ್ಲವಲ್ಲ. ಈಗ ಶಾರದಾದೇವಿಯವರ ಕಿವಿಗೆ ಬೀಳುವಂತೆ, 'ಅಯ್ಯೋ ಪಾಪ! ಶಾರದೆಯ ಗಂಡನಿಗೆ ಹುಚ್ಚಂತೆ' ಎನ್ನುವ ಮಾತುಗಳನ್ನು ಅನುಕಂಪದೊಡನೆ ವ್ಯಂಗ್ಯವಾಗಿಯೂ ಆಡತೊಡಗಿದರು. ಶಾರದಾದೇವಿಯವರಿಗೆ ಈ ಮಾತುಗಳು ಬಹಳ ನೋವನ್ನುಂಟುಮಾಡುತ್ತಿದ್ದವು. ಮನದಾಳದಲ್ಲಿ ಒಂದು ಆಶಾಕಿರಣವೂ ಎಚ್ಚರಿಸುತ್ತಿತ್ತು, 'ಇದು ಅವರ ವಿಷಯದಲ್ಲಿ ಅಸಾಧ್ಯ' ಎಂದು. ಕಳೆದ ದಿನಗಳ ಒಡನಾಟದಿಂದ ಅವರ ವಿಶೇಷತೆಯನ್ನು ಅವರು ಅರಿತಿದ್ದರು.

ಹುಟ್ಟು ಸ್ವಭಾವವೇ ಮೃದು; ಮಿತಭಾಷಿ. ಈಗ ಮತ್ತಷ್ಟು ಅಂತರ್ಮುಖಿಯಾಗಿ ಚಿಂತಿಸತೊಡಗಿದರು. ಇವರಿಗೆ ಸಾಂತ್ವನದ ಮಾತನಾಡಿ ಧೈರ್ಯ ತುಂಬುವವರು ಯಾರೂ ಇಲ್ಲ. ತಾಯಿ-ತಂದೆಯರು ಮಗಳ ಭವಿಷ್ಯ ಹೀಗಾಯಿತೇ ಎಂದು ಕೊರಗುತ್ತಿದ್ದರು. ಬೆಂಬಲಿಸಿ, ಯಾವುದಾದರೂ ರೀತಿಯಲ್ಲಿ ಪರಿಹಾರವನ್ನು ಮಾಡುವ ಕಡೆ ಗಮನ ಹರಿಸಿರಲಿಲ್ಲ. ಏಕಾಂಗಿಯಾಗಿಯೇ ತಮ್ಮ ಭವಿಷ್ಯವನ್ನು ಕುರಿತು ಚಿಂತಿಸತೊಡಗಿದರು. ಹಳ್ಳಿಯಲ್ಲಿ ಶಾರದಾದೇವಿಯವರಿಗೆ ದೂರದ ಸಂಬಂಧದಿಂದ ಸೋದರತ್ತೆ ಆಗುವ ಒಬ್ಬ ವೃದ್ಧೆ ಇದ್ದರು. ಅವರ ಬಳಿ ಮಾತ್ರ ಮನಸ್ಸಿನ ಗೊಂದಲವನ್ನು ಹೇಳಿಕೊಳ್ಳುತ್ತಿದ್ದರು. ಆಕೆ ಶಾರದಾದೇವಿಯವರ ಲಗ್ನವನ್ನು ನೋಡಿ ಆನಂದಪಟ್ಟಿದ್ದವರು. ಶ್ರೀರಾಮಕೃಷ್ಣರು ಮತ್ತು ಶಾರದಾದೇವಿಯವರ ಜೋಡಿಯನ್ನು ನೋಡಿ 'ಹರ-ಗೌರಿ'ಯಂತಿದ್ದಾರೆ ಎಂದು ಹೇಳಿದ್ದರು. ಈಗ ಆಕೆ 'ನೀನು ಚಿಂತಿಸಬೇಡ. ಎಲ್ಲವೂ ಶುಭವಾಗುತ್ತದೆ. ಎಲ್ಲರಂತಲ್ಲ ನಿನ್ನ ಪತಿ. ದೈವಾಂಶವುಳ್ಳವರು'ಎಂದು ಸಮಾಧಾನ ಮಾಡಿದರು. ಅದೊಂದೇ ಇವರ ಮನಸ್ಸಿಗೆ ನೀಡಿದ ಧೈರ್ಯದ ಮಾತು!

ಈಗ ತಾನೇನು ಮಾಡಬೇಕೆಂಬುದನ್ನು ನಿರ್ಧರಿಸಿಕೊಂಡರು. 'ಸತಿ ಪತಿಯ ಕಷ್ಟ-ಸುಖಗಳಲ್ಲಿ ಭಾಗಿಯಾಗಿದ್ದುಕೊಂಡು ಜೀವನ ನಡೆಸುವುದು ಕರ್ತವ್ಯ. ಈಗ ದಕ್ಷಿಣೇಶ್ವರದಲ್ಲಿ ಅನಾರೋಗ್ಯದಿಂದ ಪತಿ ಇರುವಾಗ, ಅಲ್ಲಿಗೆ ಹೋಗಬೇಕಾದದ್ದು ನನ್ನ

ಧರ್ಮ' ಎಂದು ಸೀತೆ, ಸಾವಿತ್ರಿಯರಂತೆ 'ಪತಿಗೆ ತಕ್ಕ ಸತಿ'ಯಾಗಿ ನಡೆದುಕೊಳ್ಳುತ್ತೇನೆಂದು ಮನದಾಳದಲ್ಲಿದ್ದ ಹಂಬಲವೂ ಇದಕ್ಕೆ ಇಂಬುಗೊಟ್ಟಿತು. ಆದರೆ ಅಲ್ಲಿಗೆ ಹೋಗುವುದು ಹೇಗೆ?

ಜಯರಾಂಬಾಟಿ-ಕಾಮಾರಪುಕುರದಾಚೆಗೆ ಅವರ ಅರಿವು ಶೂನ್ಯವೆಂದೇ ಹೇಳಬಹುದು. ನಿಸ್ಸಂಕೋಚವಾಗಿ ತಾಯಿ-ತಂದೆಯವರಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿಕೊಳ್ಳುವಷ್ಟು ವಾಚಾಳಿಯೂ ಅಲ್ಲ. ಲಜ್ಜಾಪಟಾವೃತೆ! ಆದರೆ ಸಬಲೆ! ದೈವ ಸಹಾಯವೋ ಎಂಬಂತೆ ಒಂದು ಸನ್ನಿವೇಶ ಒದಗಿಬಂದಿತು. ಆಗ ಹಳ್ಳಿಯಿಂದ ಕೆಲವರು ಪರ್ವಕಾಲದ ಗಂಗಾಸ್ನಾನಕ್ಕಾಗಿ ಕೊಲ್ಕತ್ತೆಗೆ ಹೊರಡುತ್ತಾರೆ ಎಂದು ತಿಳಿಯಿತು. ಅವರೊಡನೆ ತಾನೂ ಯಾತ್ರಾರ್ಥಿಯಾಗಿ ಹೊರಡುವುದೆಂದು ನಿಶ್ಚಯಿಸಿ, ಇತರರ ಮೂಲಕ ತಂದೆಯವರಿಗೂ ತಿಳಿಸಿ ಅವರ ಅಪ್ಪಣೆ ಯನ್ನು ಪಡೆದುಕೊಂಡು ದಕ್ಷಿಣೇಶ್ವರಕ್ಕೆ ಹೊರಡಲು ಸಿದ್ಧ ರಾದರು. ಮಗಳ ಮನೋಭಾವನೆಯನ್ನು ಸೂಕ್ಷ್ಮವಾಗಿ ಅರಿತ ರಾಮಚಂದ್ರ ಮುಖರ್ಜಿಯವರು ಮಗಳೊಡನೆ ಹೊರಡಲು ತೀರ್ಮಾನಿಸಿದರು. ಶಾರದಾದೇವಿಯವರ ವಿಶೇಷತೆಯನ್ನು ಇಲ್ಲಿ ಕಾಣಬಹುದು. ಕಾಲ್ನಡಿಗೆಯ ದೂರದ ಪ್ರಯಾಣ, ದಾರಿ ಯಲ್ಲಿ ಕಾಡು-ಮೇಡು, ಹಳ್ಳ-ಕೊಳ್ಳ, ಕಳ್ಳಕಾರರ ಕಾಟಗಳಿಂದ ತೊಂದರೆ ಆಗಬಹುದೇ ಎಂದು ಚಿಂತಿಸಲಿಲ್ಲ. ದಕ್ಷಿಣೇಶ್ವರದಲ್ಲಿ ಯಾವ ಸೌಲಭ್ಯಗಳಿರಬಹುದೆಂದು ಯೋಚಿಸಲಿಲ್ಲ. ಆಗಾಗ ಮನಸ್ಸಿನಲ್ಲಿ ಒಂದು ಸಂದೇಹ ಇಣುಕಿ ನೋಡುತ್ತಿತ್ತು. ಏನೆಂ ದರೆ ತನ್ನನ್ನು ಪತಿ ಗುರುತಿಸುವರೆ? ಅಥವಾ ಮರೆತುಬಿಟ್ಟಿ ದ್ದಾರೆಯೆ? ಎಂದು. ಆದರೆ ಮನದಾಳದೊಳಗಿನ ಶುಭ ಕಿರಣ ವೊಂದು ಬೆಳಕು ನೀಡುತ್ತಿತ್ತು. ಕಾಮಾರಪುಕುರದಲ್ಲಿ ಅವರ ಸಹವಾಸದಲ್ಲಿ ಕಳೆದ ಅಮೃತಸದೃಶ ನೆನಪುಗಳು, ಪತಿಯ ಪ್ರೀತಿಯ ಸೆಳೆತ ಹಚ್ಚಹಸಿರಾಗಿತ್ತು.

ಸಾಮಾಜಿಕವಾದ ಯಾವ ಸಂಪ್ರದಾಯಗಳಿಗೂ ಮನ ಗೊಡದೆ, ತಮ್ಮ ಗುರಿಯತ್ತ ದಿಟ್ಟ ಹೆಜ್ಜೆ ಇಟ್ಟರು. ಪ್ರಕೃತಿಯಲ್ಲಿ ಮಹತ್ವವಾದ ಪರಿವರ್ತನೆಗಳು ಯಾವ ಸದ್ದು-ಗದ್ದಲವೂ ಇಲ್ಲದೆ ಮೌನವಾಗಿಯೇ ನಡೆಯುತ್ತದೆ ಅಲ್ಲವೆ? ಮೊಗ್ಗು ಹೂವಾಗಿ ಅರಳುವಾಗ, ಕತ್ತಲಳಿದು ನೇಸರು ಮೂಡುವಾಗ ಯಾವ ಆಡಂಬರವೂ ಇರುವುದಿಲ್ಲ. ಹೂವು ಅರಳಿ ಸೌರಭ ವನ್ನು ಜಗತ್ತಿಗೆ ಹರಡುತ್ತದೆ. ಸೂರ್ಯ ಬೆಳಗಿ ಜ್ಞಾನವನ್ನು ಹಂಚುತ್ತಾನೆ. ಶಾರದಾದೇವಿಯವರಿಗೆ ಒಂದೇ ಗುರಿ ಪತಿಯ ಸಾನ್ನಿಧ್ಯವನ್ನು ತಲುಪುವುದು. ಅವರ ಪ್ರಯಾಣದ ಸಿದ್ಧತೆ ಹೇಗಿತ್ತು? ಕೇವಲ ಆವಶ್ಯಕತೆಗೆ ತಕ್ಕಷ್ಟು ವಸ್ತ್ರಗಳು ಮಾತ್ರ! ತನಗೆ ಯಾರೂ ಸಹಾಯ ಮಾಡುವವರಿಲ್ಲ ಎಂದು ಚಿಂತಿಸಲಿಲ್ಲ. ಯಾರನ್ನೂ ದ್ವೇಷಿಸಲಿಲ್ಲ. ಈ ರೀತಿ ಮಾಡು ಎಂದು ಯಾರೂ ಅವರಿಗೆ ಸಲಹೆ-ಸೂಚನೆಗಳನ್ನು ಕೊಟ್ಟಂತಿಲ್ಲ. ತಮ್ಮ ಹೆಜ್ಜೆ ಯನ್ನು ತಾವೇ ಎತ್ತಿ ಇಡಬೇಕಲ್ಲವೆ? ಸಾಮಾನ್ಯ ಒಬ್ಬ ತರು ಣಿಯ ಸ್ಥಾನದಲ್ಲಿ ನಿಂತು ಯೋಚಿಸಿದರೆ ಶಾರದಾದೇವಿಯವರ ಮಹತ್ವವನ್ನು ಅರಿಯಬಲ್ಲೆವಷ್ಟೆ. ಅವರ ಚಿತ್ತಸ್ಥೈರ್ಯವನ್ನು ಅಳೆಯಲಾದೀತೆ? ಭವಿಷ್ಯದ ಲೋಕಕಲ್ಯಾಣಕ್ಕಾಗಿ ಇಟ್ಟ ದಿಟ್ಟ ಹೆಜ್ಜೆ ಎನ್ನಲಡ್ಡಿಯಿಲ್ಲ.

ಎರಡನೆಯ ಸನ್ನಿವೇಶವನ್ನು ಗಮನಿಸೋಣ. ಅದಕ್ಕೆ ಮುನ್ನ ದಕ್ಷಿಣೇಶ್ವರದಲ್ಲಿ ನಡೆಸಿದ ಜೀವನವನ್ನು ಸೂಕ್ಷ್ಮವಾಗಿ ಅರಿತಾಗ ಮಾತ್ರ ಮಹತ್ವವೇನೆಂಬುದು ತಿಳಿಯುತ್ತದೆ. ಜಯರಾಂಬಾಟಿ ಯಿಂದ ದಕ್ಷಿಣೇಶ್ವರಕ್ಕೆ ಬಂದರು. ಪತಿಯಿಂದ ಆತ್ಮೀಯ ಸ್ವಾಗತ ದೊರೆಯಿತು. ತಮ್ಮ ಗೃಹಸ್ಥಜೀವನವನ್ನು ಪ್ರಾರಂಭಿಸಿದರು. 'ಹಾಸಿಗೆ ಇದ್ದಷ್ಟು ಕಾಲು ಚಾಚು'ವ ಗುಣವುಳ್ಳವರಾದ್ದರಿಂದ, ಯಾವ ವಿಧವಾದ ಅನುಕೂಲಗಳನ್ನೂ ನಿರೀಕ್ಷಿಸಲಿಲ್ಲ. ಸತಿ-ಪತಿಯರು ಪರಸ್ಪರ ಮನೋಭಾವನೆಗಳನ್ನು ಅರಿತು, ಲೋಕ ಕಲ್ಯಾಣಕ್ಕಾಗಿ ಆಧ್ಯಾತ್ಮಿಕ ಸಾಧನೆಯಲ್ಲಿಯೇ ಆನಂದವನ್ನು ಅನುಭವಿಸಿದರು. ಶಾರದಾದೇವಿಯವರು ಕರ್ಮಯೋಗಿನಿ ಯಾಗಿ, ಗುಪ್ತಗಾಮಿನಿಯಾಗಿ ಶ್ರೀರಾಮಕೃಷ್ಣರ ಸಾಧನೆಗೆ ಶಕ್ತಿ ದೇವತೆಯಾಗಿ ಸುಮಾರು ೧೪ ವರ್ಷಗಳ ಕಾಲ ಜೊತೆಗೂಡಿ ದರು. ಶ್ರೀಮಾತೆ ಶಾರದಾದೇವಿಯವರಿಗೆ ಶ್ರೀರಾಮಕೃಷ್ಣರು ಸಾಕ್ಷಾತ್ ಕಾಳೀಸ್ವರೂಪರು! ತಮ್ಮ ಆರಾಧ್ಯಮೂರ್ತಿಯಾದ ಭವತಾರಿಣಿಯ ಸ್ಥಾನದಲ್ಲಿ ಸತಿಯನ್ನು ಆರಾಧಿಸಿ ತಮ್ಮ ತಪಸ್ಸಿನ ಫಲವನ್ನೆಲ್ಲ ಧಾರೆಯೆರೆದು 'ಜಗನ್ಮಾತೆ'ಯ ಮೇರು ಸ್ಥಾನಕ್ಕೆ ಏರಿಸಿ ಸಂತುಷ್ಟರಾದರು ಸರ್ವಧರ್ಮಸಮನ್ವಯಾಚಾರ್ಯ, ಅವತಾರವರಿಷ್ಠ ಶ್ರೀರಾಮಕೃಷ್ಣರು! ಅವರು ಆದರ್ಶ ದಂಪತಿ ಗಳಾಗಿ ಬೆಳಗಿದರು. ಪರಿಶುದ್ಧ ಪ್ರೇಮದ ಮಹಿಮೆಯನ್ನು ಜಗತ್ತಿಗೇ ಸಾರಿದಂತಹವರು. ಶ್ರೀಮಾತೆಯವರೇ ಹೇಳಿರುವ 'ದಕ್ಷಿಣೇಶ್ವರದಲ್ಲಿ ಕಳೆದ ದಿನಗಳು ಹೃದಯದಲ್ಲಿ ಅಮೃತ ಕಲಶ ದಂತೆ ಇವೆ' ಎಂಬ ಮಾತು ಸಂತೃಪ್ತ ಜೀವನದ ಅದ್ಭುತ ವಾಣಿ ಗಳು. ಲೌಕಿಕವಾಗಿರುವ ಸಿರಿ-ಸಂಪತ್ತು, ಧನ-ಕನಕ ವಸ್ತ್ರಾದಿಗಳಿಗೆ ಇಲ್ಲಿ ಸ್ಥಾನವಿಲ್ಲ. ಇಂತಹ ದಾಂಪತ್ಯಜೀವನದಲ್ಲಿ 'ಸಂಸಾರದಲ್ಲಿ ಯಾವುದೂ ಶಾಶ್ವತವಲ್ಲ' ಎಂಬ ವಾಕ್ಯಕ್ಕೆ ಹೊಂದಿಕೊಂಡಂತೆ ಶ್ರೀರಾಮಕೃಷ್ಣರ ಆರೋಗ್ಯದಲ್ಲಿ ವ್ಯತ್ಯಾಸವಾಯಿತು.

ಶ್ರೀರಾಮಕೃಷ್ಣರಿಗೆ ಗಂಟಲು ಹುಣ್ಣಿನಿಂದ ಪ್ರಾರಂಭವಾದ ವ್ಯಾಧಿ 'ಕ್ಯಾನ್ಸರ್' ಎಂದು ವೈದ್ಯರು ಹೇಳಿದರು. ಅದು ವೈದ್ಯರ ಚಿಕಿತ್ಸೆಗಳಿಂದ ಗುಣಮುಖವಾಗುವ ಸೂಚನೆ ಕಂಡುಬರಲಿಲ್ಲ. ಉತ್ತಮ ಚಿಕಿತ್ಸೆಗಾಗಿ ರಾಮಕೃಷ್ಣರ ಆಪ್ತಶಿಷ್ಯರು, ಗೃಹಸ್ಥಭಕ್ತರು, ವೈದ್ಯರ ಸಲಹೆಯಂತೆ ದಕ್ಷಿಣೇಶ್ವರದಿಂದ ಕೊಲ್ಕತ್ತೆಗೆ ಕರೆದು ಕೊಂಡು ಹೋಗಲು ನಿರ್ಧರಿಸಿದರು. ಹೇಗಾದರೂ ಮಾಡಿ ಅವರನ್ನು ಉಳಿಸಿಕೊಳ್ಳುವುದು ಎಲ್ಲರ ಅಭಿಪ್ರಾಯವಾಗಿತ್ತು. ಅದರಂತೆ ಶ್ರೀರಾಮಕೃಷ್ಣರನ್ನು ಕೊಲ್ಕತ್ತೆಗೆ ಕರೆತಂದರು. ಒಂದು ಬಾಡಿಗೆಯ ಮನೆಯಲ್ಲಿ ವ್ಯವಸ್ಥೆ ಮಾಡಿದ್ದರು. ಆದರೆ ಆ ಮನೆ ಬಹಳ ಚಿಕ್ಕದಾಗಿ, ಗಾಳಿ, ಬೆಳಕಿಗೂ ತೊಂದರೆಯಾದ್ದರಿಂದ,

ಅದನ್ನು ಬಿಟ್ಟು ಶ್ಯಾಮಪುಕುರವೆಂಬಲ್ಲಿ ಸ್ವಲ್ಪ ದೊಡ್ಡ ಮನೆಗೆ ಕರೆತಂದರು. ವೈದ್ಯರ ಔಷಧೋಪಚಾರಗಳು ಮುಂದುವರಿದವು. ಔಷಧವು ಕೆಲಸ ಮಾಡಬೇಕಾದರೆ ಅದಕ್ಕೆ ಅನ್ನ-ಪಾನಾದಿಗಳ ಪಥ್ಯವೂ ಅತ್ಯಗತ್ಯ. ಭಕ್ತರಿಗೆ ಈಗ ಇದೊಂದು ದೊಡ್ಡ ಸಮಸ್ಯೆ ಎದುರಾಯಿತು. ಇಲ್ಲಿಯವರೆಗೂ ದಕ್ಷಿಣೇಶ್ವರದಲ್ಲಿ ಶ್ರೀಮಾತೆಯವರು, ಪತಿಯ ಆರೋಗ್ಯಕ್ಕೆ ತಕ್ಕಂತೆ ಊಟೋಪಚಾರಗಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಆದ್ದರಿಂದ ಯಾರಿಗೂ ಅತ್ತ ಗಮನವಿರಲಿಲ್ಲ. ಈಗ ಅವರನ್ನು ಅಲ್ಲಿಗೆ ಕರೆತರುವ ಯೋಚನೆ ಮಾಡಿದರು. ಶ್ಯಾಮಪುಕುರದ ಮನೆಯಲ್ಲಿ ಶ್ರೀಮಾತೆಯವರಿಗೆ ಪ್ರತ್ಯೇಕವಾದ ಕೊಠಡಿ ಕೊಡುವಷ್ಟು ಅನುಕೂಲವಿರಲಿಲ್ಲ. ಶ್ರೀರಾಮಕೃಷ್ಣರ ಸೇವೆ-ಶುಶ್ರೂಷೆಗಾಗಿ ಇದ್ದವರೆಲ್ಲ ಪುರುಷರು. ಅದರಲ್ಲಿಯೂ ಯುವಕರೇ ಹೆಚ್ಚು. ಒಂಟಿಯಾಗಿ ಇರಲು ಶ್ರೀಮಾತೆಯವರು ಒಪ್ಪುವರೇ ಎಂಬ ಸಂಶಯವುಂಟಾಯಿತು. ಏಕೆಂದರೆ ದಕ್ಷಿಣೇಶ್ವರದಲ್ಲಿ ಇದ್ದಾಗಲೂ ಶ್ರೀಮಾತೆಯವರನ್ನು ಪ್ರತ್ಯಕ್ಷವಾಗಿ ನೋಡಿದವರು ಬೆರಳೆಣಿಕೆಯ ಮಂದಿ. ಶ್ರೀರಾಮಕೃಷ್ಣರಿಗೆ ಭಕ್ತರು ಇರುವ ವಿಷಯವನ್ನೆಲ್ಲ ಶ್ರುತಪಡಿಸಿದರು. ಶ್ರೀರಾಮಕೃಷ್ಣರು ಸಹಜವಾಗಿ ಭಕ್ತರಿಗೆ, 'ನೀವುಗಳು ದಕ್ಷಿಣೇಶ್ವರಕ್ಕೆ ಹೋಗಿ, ಇಲ್ಲಿನ ಪರಿಸ್ಥಿತಿಯನ್ನೆಲ್ಲ ವಿವರವಾಗಿ ತಿಳಿಸಿ. ಅವರು ಬರುವುದಾದರೆ ಬರಲಿ' ಎಂದುಬಿಟ್ಟರು.

ಈಗ ಶ್ರೀಮಾತೆಯವರ ಬಗ್ಗೆ ಗಮನ ಹರಿಸೋಣ. ಶ್ರೀರಾಮಕೃಷ್ಣರನ್ನು ದಕ್ಷಿಣೇಶ್ವರದಿಂದ ಕೊಲ್ಕತ್ತೆಗೆ ಕರೆದುಕೊಂಡು ಹೋಗುವಾಗ, ಯಾರಾದರೂ ಶ್ರೀಮಾತೆಯವರಿಗೆ ವಿಷಯ ತಿಳಿಸಿದರೆ? ಬಹುಶಃ ಇಲ್ಲವೆಂದೇ ಭಾವಿಸಬಹುದು. ಎಲ್ಲರಿಗೂ ಶ್ರೀರಾಮಕೃಷ್ಣರ ದೇಹಾರೋಗ್ಯ ಸುಧಾರಣೆ ಕಡೆಗೆ ಗಮನವಿತ್ತೇ ವಿನಾ ಬೇರಾವುದೂ ಚಿಂತನೆಗೆ ಬರಲೇ ಇಲ್ಲವೆನ್ನುವುದರಲ್ಲಿ ತಪ್ಪೇನೂ ಇಲ್ಲ. ಶ್ರೀಮಾತೆಯವರಿಗೂ ವಿಷಯದ ಅರಿವಾಗಿರಬಹುದು. ತಮ್ಮ ಮನಸ್ಸಿನ ಭಾವನೆಯನ್ನು ಎಂದೂ ಯಾರಲ್ಲಿಯೂ ಹೇಳಿಕೊಂಡವರೇ ಅಲ್ಲವಲ್ಲ. ಈಗ ದಕ್ಷಿಣೇಶ್ವರದಲ್ಲಿ ನಹಬತ್ ಖಾನೆಯಲ್ಲಿ ಏಕಾಂಗಿ! ದಿನದ ಇಪ್ಪತ್ತುನಾಲ್ಕು ಗಂಟೆಯೂ ಭಕ್ತರಿಂದ ತುಂಬಿ ಗಿಜಿಗಿಜಿಗುಡುತ್ತಿದ್ದ ದಕ್ಷಿಣೇಶ್ವರ ಈಗ ಇದ್ದಕ್ಕಿದ್ದಂತೆ ನಿರ್ಜನವಾಗಿಬಿಟ್ಟಿದೆ. ಬೆಳಗಿನ ಜಾವದಿಂದ ರಾತ್ರಿಯವರೆಗೂ ಕಾರ್ಯನಿರತರಾಗಿರುತ್ತಿದ್ದ ಶ್ರೀಮಾತೆಯವರಿಗೆ ಈಗ ಕೆಲಸವೇ ಇಲ್ಲ! ಕೈಗೆ ಕೆಲಸವಿಲ್ಲ. ತಲೆಯಲ್ಲಿ ಪತಿಯ ಚಿಂತೆ, ಎಲ್ಲ ಕಡೆಯೂ ಶೂನ್ಯ! ಸುಮಾರು ಹದಿನಾಲ್ಕು ವರ್ಷಗಳಿಂದ 'ಪತಿಗೆ ತಕ್ಕ ಸತಿ'ಯಾಗಿ, ಕರ್ಮಯೋಗಿನಿಯಾಗಿ, ಗುಪ್ತಗಾಮಿನಿಯಂತೆ ಶಕ್ತಿದೇವತೆಯಾಗಿದ್ದವರಿಗೆ, ಈಗ ಇದ್ದ ಆಸರೆಯೂ ತಪ್ಪಿಹೋಗಿದೆ. ಯಾವ ಭಕ್ತರೂ ಇತ್ತ ಕಡೆ ಸುಳಿಯುತ್ತಿಲ್ಲ. ಒಬ್ಬ ಭಕ್ತರ ಮಗಳು ಮಾತ್ರ ಗಂಗಾಸ್ನಾನಕ್ಕೆ ಬಂದಾಗ ಶ್ರೀಮಾತೆಯವರೊಡನೆ ಸ್ವಲ್ಪ ಕಾಲ ಕಳೆದು ಹೋಗುತ್ತಿದ್ದಳು. ಆಗ ಅವಳಿಂದ ಬಂಗಾಳಿ ರಾಮಾಯಣವನ್ನು ಓದುವುದಕ್ಕೆ ಕಲಿತರು. ಇದು ಅವರ ಚಿತ್ತಸ್ಥೈರ್ಯಕ್ಕೆ ಉದಾಹರಣೆಯಂತಿದೆ. ಸಾಮಾನ್ಯರ ಸ್ಥಾನದಲ್ಲಿ ನಿಂತು ಯೋಚಿಸಿದರೆ ಅವರ ಮಹಿಮೆ ಅರಿವಾಗುತ್ತದೆ. ತಮ್ಮ ನೋವನ್ನು ತಾವೇ ನುಂಗಿದರು. ಯಾರನ್ನೂ ದೂಷಿಸಲಿಲ್ಲ. ತಾವಾಗಿಯೇ ಶ್ರೀರಾಮಕೃಷ್ಣರಿದ್ದಲ್ಲಿಗೆ ಹೋಗುವಷ್ಟು ಧೈರ್ಯವೂ ಇರಲಿಲ್ಲ. ಪತಿಯ ಆರೋಗ್ಯಕ್ಕಾಗಿ ಹಗಲಿರುಳೂ ಪ್ರಾರ್ಥನೆ ಸಲ್ಲಿಸುವುದೇ ಅವರ ಬದುಕಾಗಿತ್ತು.

ಇಂತಹ ಸಮಯದಲ್ಲಿ ಅನಿರೀಕ್ಷಿತವಾಗಿ ಭಕ್ತರು ಆಗಮಿಸಿದರು. ಶ್ಯಾಮಪುಕುರದಲ್ಲಿನ ವಿಷಯವನ್ನೆಲ್ಲ ವಿವರಿಸಿದರು. ಶ್ರೀಮಾತೆಯವರು ಅಲ್ಲಿಗೆ ಬಂದೇ ಬರುತ್ತಾರೆ ಎಂಬ ವಿಷಯದಲ್ಲಿ ಯಾರಿಗೂ ನಂಬಿಕೆ ಇರಲಿಲ್ಲ. ಶ್ರೀಮಾತೆಯವರು ವಿಷಯವನ್ನೆಲ್ಲ ತಿಳಿದರು. ಶ್ಯಾಮಪುಕುರಕ್ಕಾಗಿ ಹೊರಟೇಬಿಟ್ಟರು! ಹೇಗೆ? ಕೇವಲ ತಮಗೆ ಅವಶ್ಯವಾದ ವಸ್ತ್ರಗಳೊಂದಿಗೆ ಇಲ್ಲಿಯವರೆಗೂ ಇದ್ದ ನಹಬತ್‌ಖಾನೆಯ ಮೇಲಾಗಲೀ, ಅಲ್ಲಿದ್ದ ಇತರ ವಸ್ತುಗಳ ಮೇಲಾಗಲೀ ನಿರ್ಮೋಹಿಗಳಾಗಿ, ತಮ್ಮ ಕರ್ತವ್ಯದತ್ತ ನಡೆದೇ ಬಿಟ್ಟರು! ಶ್ಯಾಮಪುಕುರದಲ್ಲಿ ತನಗೆ ಯಾವ ಸೌಕರ್ಯವಿದೆ ಎಂದು ಚಿಂತಿಸಲಿಲ್ಲ. ಪತಿಯ ಸೇವೆಗಾಗಿ ದಿಟ್ಟ ಹೆಜ್ಜೆ ಇಟ್ಟು ಹೊರಟ ಮಹಾಸತಿ ಶ್ರೀಮಾತೆಯವರು! ಸದ್ದುಗದ್ದಲವಿಲ್ಲದೆ ಮೊದಲನೆಯ ಬಾರಿ ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಹೇಗೆ ಹೊರಟು ಬಂದರೋ, ಈಗ ಕಡೆಯ ಬಾರಿ ದಕ್ಷಿಣೇಶ್ವರದಿಂದಲೂ ಹೊರಟಿದ್ದಾರೆ. ಮೊದಲನೆಯದು ತಮ್ಮ ಪತಿಯ ಆರೋಗ್ಯಕ್ಕಾಗಿ ಬಂದರು. ಗೃಹಸ್ಥಜೀವನ ನಡೆಸಿದರು. ದಂಪತಿಗಳು ಲೋಕಪೂಜ್ಯರಾದರು. ಈಗಲೂ ಪತಿಯ ಆರೋಗ್ಯದ ಚಿಂತೆಯಿಂದಲೇ ಹೊರಟರೂ ಸಹ ಇಲ್ಲಿಯವರೆಗೆ ಬದುಕಿನ ಆಸರೆಯಾಗಿದ್ದ ಪತಿಯ ವಾಸಿಯಾಗದ ರೋಗದ ಚಿಂತೆ ಮನದಲ್ಲಿ ತುಂಬಿದೆ. ಶ್ಯಾಮಪುಕುರಕ್ಕೆ ಬಂದರು. ಅತ್ಯಂತ ಸೂಕ್ಷ್ಮ ಪರಿಸ್ಥಿತಿಯಲ್ಲಿಯೂ ತಮ್ಮೆದೆಯಾಳವನ್ನು ಯಾರಲ್ಲಿಯೂ ಹೇಳಿಕೊಳ್ಳದೆ ತಮ್ಮ ಕರ್ತವ್ಯವನ್ನು ನಿಭಾಯಿಸಿದಂತಹ ಸತಿ ಸಾಧ್ವಿ!

ಮೇಲಿನೆರಡು ಸನ್ನಿವೇಶಗಳಲ್ಲಿಯೂ ಶ್ರೀಮಾತೆ ಶಾರದಾದೇವಿಯವರ ನಡತೆ ಮಹತ್ವವುಳ್ಳದ್ದು. ತಮ್ಮ ಸಂಕಲ್ಪವನ್ನು ನೆರವೇರಿಸಿಕೊಳ್ಳುವುದಕ್ಕೆ ಅವರಿವರ ಕಡೆ ಕೈಚಾಚಲಿಲ್ಲ. ಸ್ವಾಭಿಮಾನಿ! ಅತ್ಯಂತ ಸರಳಜೀವನವನ್ನು ನಡೆಸಿದರು. ಅತ್ಯಂತ ಉನ್ನತ ಮಟ್ಟಕ್ಕೆ ಏರಿದರು. ಪತಿಗೆ ತಕ್ಕ ಸತಿಯಾಗಿ ಕರ್ತವ್ಯವನ್ನು ನಿಭಾಯಿಸಿದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರವೂ ಪತಿಯ ಅಳಿದುಳಿದ ಕಾರ್ಯವನ್ನು ಪೂರೈಸಿದರು. ಉದ್ದುದ್ದ ಭಾಷಣ ಮಾಡಲಿಲ್ಲ. ಯಾವ ವೇದಿಕೆಯ ಮೇಲೆಯೂ ಕಾಣಿಸಿಕೊಳ್ಳಲಿಲ್ಲ. ಇಂತಹ ಮಹಿಮರಿಬ್ಬರ ಜೀವನದಿಂದ ಅರಿಯಬಹುದಾದ್ದು ಬಹಳಷ್ಟು ಇವೆ. ಅವರವರ ಶಕ್ತಿಗೆ ತಕ್ಕಷ್ಟು ಅರಿತು ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಅವಕಾಶವಿದೆ. 'ಹೇ ಮಾತೆ, ನೀ ಮಹಾ ಮಹಿಮಳಮ್ಮಾ' ನಿನಗೆ ಶತಶತ ನಮಸ್ಕಾರಗಳು!